ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಆಯವ್ಯಯದಂತೆ ಹಂಚಿಕೆ ಮಾಡಿರುವ ಮೊತ್ತ ಬಿಡುಗಡೆ ಕುರಿತು

ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

329(194) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2018-19ನೇ ಸಾಲಿನ ಆರ್ಥಿಕ ವರ್ಷದಲ್ಲಿ ಇದುವರೆಗೆ ಯಾವ ಯಾವ ಇಲಾಖೆಯಲ್ಲಿ ಆಯವ್ಯಯದಂತೆ ಹಂಚಿಕೆ

ಮಾಡಿರುವ ಮೊತ್ತವನ್ನು ಈಗಾಗಲೇ ಬಿಡುಗಡೆಯಾಗಿರುವ 1 ಮತ್ತು 2ನೇ ಕಂತಿನ ಹಣದ ಶೇ 75ರಷ್ಟನ್ನು ದಿನಾಂಕ:: 31-01-2019 ರವರೆಗೂ ವೆಚ್ಚ ಮಾಡಲು ಸಾಧ್ಯವಾಗಿಲ್ಲ; (ಇಲಾಖಾವಾರು ವಿವರ ನೀಡುವುದು)

(ಆ) ಬಿಡುಗಡೆಯಾಗಿರುವ 1 ಮತ್ತು 2ನೇ ಕಂತಿನ ಹಣದ ಶೇ 75ರಷ್ಟನ್ನು ವೆಚ್ಚ ಮಾಡದೇ ಇದ್ದರೂ ಸರ್ಕಾರವು ಯಾವ ಯಾವ ಇಲಾಖೆಗಳಿಗೆ 3 ಮತ್ತು 4ನೇ ಕಂತಿನ ಹಣವನ್ನು ಬಿಡುಗಡೆಗೊಳಿಸಿದೆ; (ಇಲಾಖಾವಾರು ವಿವರ ನೀಡುವುದು)

(ಇ) ಯಾವ ಯಾವ ಇಲಾಖೆಗಳು ಸರ್ಕಾರವು ಬಿಡುಗಡೆ ಮಾಡಿದ ಎಲ್ಲಾ ಅನುದಾನವನ್ನು ವೆಚ್ಚ ಮಾಡಿ ಹೆಚ್ಚುವರಿ ಅನುದಾನವನ್ನು ಕೋರಿ ಮನವಿ ಸಲ್ಲಿಸಿವೆ? (ಇಲಾಖಾವಾರು ವಿವರ ನೀಡುವುದು)